(9) ಶಿವಮೊಗ್ಗ ಜಿಲ್ಲೆಯಲ್ಲಿರುವ ತಾಳೆಎಣ್ಣೆ ಕಾರ್ಖಾನೆಯ ಪ್ರಾರಂಭವನ್ನು ವಿಳಂಬಗೊಳಿಸುತ್ತಿರುವ ಬಗ್ಗೆ

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ತಾಳೆ ಎಣ್ಣೆ ಫ್ಯಾಕ್ಟರಿ ನಿಗಧಿತ ಸಮಯದಲ್ಲಿ ಸರಿಯಾಗಿ ಮುಗಿಯುವುದೇ? ನಿಗಧಿತ ಸಮಯ ಯಾವುದು? ಮುಗಿಯದಿದ್ದರೆ ರೈತ ಬೆಳೆಯುವ ತಾಳೆ ಹಣ್ಣುಗಳನ್ನು ಬೇರೆ ಯಾವುದಾದರೂ ಫ್ಯಾಕ್ಟರಿಗಳಿಗೆ ಕಳುಹಿಸುವ ವ್ಯವಸ್ಥೆ ಮಾಡುವಿರಾ? ರೈತನಿಗೆ ಆಗುವ ನಷ್ಟಕ್ಕೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುತ್ತದೆಯೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆ ಮಾಡಬಯಸುತ್ತೇನೆ. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ಓಸ್ವಾಲ್ ಫಾಮ್ ಇಂಡಿಯಾ ಲಿಮಿಟೆಡ್ ಸಂಸ್ಥೆಯೊಡನೆ ದಿನಾಂಕ 4-4-1991ರಂದು ಜಂಟಿ ವಲಯದಲ್ಲಿ ತಾಳೆ ಎಣ್ಣೆಯನ್ನು ಉತ್ಪಾದಿಸುವ ಘಟಕ ಒಂದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸಲು ಒಪ್ಪಂದ ಒಂದನ್ನು ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ ಕೆ.ಎಸ್.ಐ. ಐ.ಡಿ.ಸಿ. ಶೇಕಡ 26 ಬಂಡವಾಳ ಹೂಡುವುದೆಂದು ಮತ್ತು ಓಸ್ವಾಲ್ ಗುಂಪು ಶೇಕಡ 25 ರಷ್ಟು ಬಂಡವಾಳ ಹೂಡುವುದೆಂದು ಮತ್ತು ಉಳಿದ ಶೇಕಡ 49 ಬಂಡವಾಳವನ್ನು ಸಾರ್ವಜನಿಕರಿಂದ ಎತ್ತಲು ನಿರ್ಧರಿಸಲಾಯಿತು. 26-12-1991ರಂದು ಜಂಟೀ ವಲಯದ ಈ ಉದ್ಯಮವನ್ನು ಕರ್ನಾಟಕ ಓಸ್ವಾಲ್ ಫಾಮ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಸ್ಥಾಪಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ ರೂ.925 ಲಕ್ಷ ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆಯು ರೂ.104 ಲಕ್ಷಗಳನ್ನು ಹೂಡಿದ್ದು ಮತ್ತು ಓಸ್ವಾಲ್ ಗುಂಪು ರೂ.100ಲಕ್ಷ ಹೂಡಿತ್ತು. ಕೆ.ಎಸ್.ಐ.ಐ.ಡಿ.ಸಿ. ಈಗಾಗಲೇ ರೂ. 65.65 ಲಕ್ಷ ಬಂಡವಾಳೂಡದೆ ಮತ್ತು ಓಸ್ವಾಲ್ ಗುಂಪು ಯೋಜನೆಯ ಅನುಷ್ಠಾನಕ್ಕೆ ಈಗಾಗಲೇ ರೂ.100 ಲಕ್ಷ ಹೂಡಿದೆ ಮತ್ತು ಮಲೇಶಿಯಾ, ಸಿಂಗಪೂರ್ ಮತ್ತು ಆಸ್ಟ್ರೇಲಿಯಗಳಿಂದ ಬೇಕಾದ ಯೆಂತ್ರೋಪಕರಣ ಗಳನ್ನು ತರಿಸಲು ರೂ.50 ಲಕ್ಷದ ಲೆಟರ್ ಆಫ್ ಕ್ರೆಡಿಟ್‌ನ್ನು ದೊರಕಿಸಲು ಒಪ್ಪಿಕೊಂಡಿದೆ. ಕಂಪನಿಯು ಹಣಕಾಸು ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಹಣ ಎತ್ತಲು ಮತ್ತು ಸಾರ್ವಜನಿಕರಿಂದ ಬಂಡವಾಳ ಶೇಖರಿಸಲು ಕ್ರಮ ಕೈಗೊಂಡಿದೆ. ಯೋಜನೆಗೆ ಕರ್ನಾಟಕ ಸರ್ಕಾರವು ಕಾರೇಹಳ್ಳಿ ಪ್ರದೇಶದಲ್ಲಿ ಒದಗಿಸಿರುವ 50 ಎಕರೆ ಪ್ರದೇಶವನ್ನು ಕೆ.ಎಸ್.ಐ.ಐ.ಡಿ.ಸಿ. ತನ್ನ ವಶಕ್ಕೆ ತೆಗೆದುಕೊಂಡಿದೆ. ಕಟ್ಟಡಗಳು ಮತ್ತು ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿ ಇವೆ ಮತ್ತು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಗೆ ಮತ್ತು ಆಮದು ಮಾಡಬೇಕಾದ ಉಪಕರಣಗಳಿಗೆ ಒಪ್ಪಂದ ಒಂದನ್ನು ಮಾಡಿಕೊಳ್ಳಲಾಗಿದೆ. ಕಂಪನಿಯು 50 ಕೆ.ವಿ.ಎ. ವಿದ್ಯುಚ್ಛಕ್ತಿಯನ್ನು ತಾತ್ಕಾಲಿಕವಾಗಿ ಪಡೆದಿದೆ ಮತ್ತು ಯೋಜನೆಗೆ ಬೇಕಾದ 400 ಕೆ.ವಿ.ಎ.ಯ ಕಾಯಂ ವಿದುಚ್ಛಕ್ತಿಯನ್ನು ಪಡೆಯಲು ಸೆಕ್ಯುರಿಟಿ ಡಿಪೋಸಿಟ್ ತುಂಬಿದೆ. ಮೊದಲು ಯೋಜಿಸಿದಂತೆ ಯೋಜನೆಯು ಜೂನ್ 1993ರಲ್ಲಿ ಪೂರ್ಣಗೊಳ್ಳುವ ಸಂಭವವಿದೆ. ಇದೇ ಸಮಯಕ್ಕೆ ಸರಿಯಾಗಿ ಪ್ರಥಮ ಕಂತು ತಾಳೆ ಹಣ್ಣುಗಳ ಕುಯಿಲನ್ನು ನಿರೀಕ್ಷಿಸಲಾಗಿದೆ.

ಕಂಪನಿಯು ಹಣ್ಣುಗಳ ಕುಯಿಲು ಆದಂತೆ ಬೇರೆ ಮಾರ್ಗಗಳಿಂದ ಸಂಸ್ಕರಿಸಲು ವ್ಯವಸ್ಥೆ ಮಾಡುವುದು. ಹಣ್ಣುಗಳ ಕುಯಿಲಿನ ಸಮಯಕ್ಕೆ ಸರಿಯಾಗಿ ಅವುಗಳ ಸಂಸ್ಕರಣಕ್ಕಾಗಿ ಬೇಕಾದ ಪ್ರಮುಖ ಉಪಕರಣಗಳ ಸ್ಥಾಪನೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

ಹಣ್ಣುಗಳ ಕುಯಿಲಿಗಾಗಿ ಸಿದ್ದವಾಗಿದ್ದಂತ ಅವುಗಳನ್ನು ರೈತರಿಂದ ಪಡೆಯಲು ಕಂಪನಿಯಯೋಚಿಸಿದೆ. ಈ ವ್ಯವಸ್ಥೆಯಿಂದ ರೈತರಿಂದ ಕಂಪನಿಯು ತಾಳೆಹಣ್ಣುಗಳನ್ನು ಸ್ವೀಕರಿಸದಿರುವ ಪ್ರಶ್ನೆಯಾಗಲಿ ಅಥವಾ ಅವರಿಗೆ ನಷ್ಟ ತುಂಬುವ ಪ್ರಮೇಯವಾಗಲಿ ಉದ್ಭವಿಸುವುದಿಲ್ಲ.

ಛೇರ್ಮನ್ : ಈಗ ಸಭೆಯು ಮೇಲೆದ್ದು ಮತ್ತೆ 2.00 ಗಂಟೆಗೆ ಸಮಾವೇಶಗೊಳ್ಳುವುದು.

(ಶ್ರೀ ವಿ.ಎಸ್. ಕೌಜಲಗಿ, ಅಧ್ಯಕ್ಷರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಸದನವು ಮತ್ತೆ 2-32ಕ್ಕೆ ಸಮಾವೇಶಗೊಂಡಿತು.

ಸಭಾಧ್ಯಕ್ಷರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ. ಅಂಗನವಾಡಿ ಕಾರ್ಯಕರ್ತೆಯರ ಗಂಭೀರ ಸಮಸ್ಯೆಯ ಬಗ್ಗೆ ಪ್ರಸ್ತಾಪ.

ಶ್ರೀ ಆರ್. ವಿ. ದೇಶಪಾಂಡೆ : ಸನ್ಮಾನ್ಯ ಅಧ್ಯಕ್ಷರೇ , ನಾನು ಬಜೆಟ್ ಮೇಲೆ ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ತಮ್ಮಿಂದ ವಿಶೇಷ ಅನುಮತಿ ಪಡೆದುಕೊಂಡು ಈ ಅಂಗನವಾಡಿ ಕಾರ್ಯಕರ್ತರ ವಿಷಯವನ್ನು ಎತ್ತುತ್ತಿದ್ದೇನೆ. ಇದು ಬಹಳ ಗಂಭೀರವಾದ ವಿಷಯ, ಅವರಿಗೆ ಅನೇಕ ಸಮಸ್ಯೆಗಳಿವೆ. ಇಡೀ ರಾಜ್ಯದಿಂದ ಸುಮಾರು 10-15 ಸಾವಿರ ಅಂಗನವಾಡಿ ಕಾರ್ಯಕರ್ತರು ಬೆಂಗಳೂರಿಗೆ ಬಂದಿದ್ದಾರೆ. ಅವರ ಬೇಡಿಕೆಗಳು ಸರ್ಕಾರಕ್ಕೆ ಗೊತ್ತಿದೆ, ಸಾಕಷ್ಟು ವರ್ಷಗಳಿಂದ ಅವರು ಹೋರಾಟ ಮಾಡುತ್ತಿದ್ದಾರೆ. ಆದರೂ ಕೂಡ ಅವರ ಬೇಡಿಕೆಗಳನ್ನು ಸರ್ಕಾರದವರು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಕೂಲಿ ಮಾಡತಕ್ಕ ಜನ , ದಿನಕ್ಕೆ 25-30 ರೂಪಾಯಿ ಗಳಿಸುತ್ತಾರೆ. ಆದರೆ, ಅಂಗನವಾಡಿ ಕಾರ್ಯಕರ್ತರು ಇಷ್ಟನ್ನೂ ಪಡೆಯುತ್ತಿಲ್ಲ. ಮನೆಯಲ್ಲಿ ಸಣ್ಣ ಮಗುವಿಗೆ ತಾಯಿ ರಕ್ಷಣೆ ಕೊಟ್ಟು ಬೆಳೆಸುತ್ತಾಳೆ. ಅವರ ನಂತರದ ಜವಾಬ್ದಾರಿ, ಪಾಠ ಹೇಳುವ ಎರಡನೇ ಜವಾಬ್ದಾರಿ ಈ ಅಂಗನವಾಡಿ ಕಾರ್ಯಕರ್ತೆಯರದು. ಇಂತಹ ಕಾರ್ಯಕರ್ತೆಯರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಅವರ ಸಮಸ್ಯೆಯನ್ನು ತಿಳಿದುಕೊಂಡು, ಆ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕಾಗುತ್ತದೆ. ನನಗೆ ಗೊತ್ತು, ಈ ವಿಷಯವನ್ನು ಎತ್ತಿದ ತಕ್ಷಣವೇ, ಅಥವಾ ನಾಳೆಯೇ ಇವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಡೀ ರಾಜ್ಯದಿಂದ ಬೆಂಗಳೂರಿಗೆ ಬಂದಿದ್ದಾರೆ. ಆ ಸಂಘದ ಪ್ರತಿನಿಧಿಗಳನ್ನು ಕರೆಯಿಸಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಅವರ ಸಂಬಳವನ್ನು ಹೆಚ್ಚು ಮಾಡುವುದಕ್ಕೆ, ಸಾಧ್ಯವಾಗುವಂತಿದ್ದರೆ, ಹೆಚ್ಚು ಮಾಡಿಕೊಡಬೇಕು. ಬೇರೆ ಡಿಮ್ಯಾಂಡ್‌ಗಳು ಏನಿವೆ ಅದರ ಬಗ್ಗೆಯೂ ಕೂಡ ತಾವು ಪರಿಶೀಲನೆ ಮಾಡಿ, ಅದಕ್ಕೆ ಒಂದು ಸೂಕ್ತ ಪರಿಹಾರ ಕಂಡುಹಿಡಿಯಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

* ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಅತ್ಯಂತ ಗಂಭೀರವಾದ ವಿಷಯವಾದ್ದರಿಂದ ತಮ್ಮ ಅಪ್ಪಣೆ ಪಡೆದು ಎತ್ತಿದ್ದೇವೆ. ಇವತ್ತು 15-16 ಸಾವಿರ ಜನ ಕಾರ್ಯಕರ್ತರು ಬಂದಿದ್ದಾರೆ, ಇದು ಒಂದು ಸಾರಿ ಅಲ್ಲ, ಅನೇಕ ಸಾರಿ ಬಂದು ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಬೆಂಗಳೂರಿಗೆ ಬಂದು ಧರಣಿ ಮಾಡಿದ್ದಾರೆ, ಅವರನ್ನು ಬಂಧಿಸಿ ಬಿಡುಗಡೆ ಮಾಡಿದ್ದೀರಿ. ಅವರಿಗೆ ಬರೀ 230 ರೂಪಾಯಿ ಕೊಡುತ್ತೀರಿ, ನೂರಕ್ಕೆ 90